ಉ) ವಿದೇಶಿ ಬಂಡವಾಳವನ್ನು ತರುವಾಗ ಭಾರತೀಯ ಕಾನೂನುಗಳು ಉಲ್ಲಂಘನೆಯಾಗಿದೆಯೇ ಉಲ್ಲಂಘನೆಯಾಗಿರುವ ಕಾನೂನುಗಳ ಯಾವುವು?

ಶ್ರೀ ಆರ್ ವಿ ದೇಶಪಾಂಡೆ (ಬೃಹತ್ ಮತ್ತು ಮಾಧ್ಯಮ ಕೈಗಾರಿಕೆ ಸಚಿವರು)

ಅ) ಕಳೆದ ಎರಡು ವರ್ಷಗಳಲ್ಲಿ 610 ವಿದೇಶಿ ಕಂಪೆನಿಗಳು ಒಟ್ಟು ರೂ 3104.83 ಕೋಟಿಗಳಷ್ಟು ಬಂಡವಾಳವನ್ನು ರಾಜ್ಯದಲ್ಲಿ ಹೂಡಲು ಅನುಮೋದನೆ ಪಡೆದಿದೆ

	ಸಂಖ್ಯೆ	ಬಂಡವಾಳ (ಕೋಟಿ ರೂ.ಗಳಲ್ಲಿ)
2001–02	320	820 20
2002–03	290	2283 83
	610	3104 03

ಆ) ವಿದೇಶಿ ಕಂಪೆನಿಗಳ ಬಂಡವಾಳ ಹೂಡಿಕೆಯಿಂದ ರಾಜ್ಯದಲ್ಲಿ ಪೂರಕ ಉದ್ದಿಮೆಗಳ ಸ್ಥಾಪನೆಗೆ ಅನುಕೂಲವಾಗುವುದು

ಇ) ಮಾಹಿತಿ ತಂತ್ರಜ್ಞಾನ, ಇಂಜಿನಿಯರಿಂಗ್ ಉದ್ಯಮ, ಆಟೋಮೋಬೈಲ್ ಜವಳಿ ಆಹಾರ ಪರಿಷ್ಕರಣೆ ರಾಸಾಯನಿಕ ಹಾಗೂ ಇತರೆ ವಲಯಗಳಲ್ಲಿ ಕಳೆದ ಎರಡು ಸಾಲಿನಲ್ಲಿ ಒಟ್ಟು ರೂ 3104 83 ಕೋಟಿಗಳಷ್ಟು ಬಂಡವಾಳವನ್ನು ರಾಜ್ಯದಲ್ಲಿ ಹೂಡಲು ಅನುಮೋದನೆ ಪಡೆದಿದೆ

ಈ) ವಿದೇಶಿ ಬಂಡವಾಳವನ್ನು ತರುವ ಬಗ್ಗೆ ಕರ್ನಾಟಕ ಕಾನೂನುಗಳಿಂದ ಯಾವುದೇ ತೊಂದರೆ ಇರುವುದಿಲ್ಲ

ಉ) ವಿದೇಶಿ ಬಂಡವಾಳ ತರುವಾಗ ಭಾರತೀಯ ಕಾನೂನುಗಳ ಉಲ್ಲಂಘನೆಯಾದ ಯಾವ ಪ್ರಕರಣವು ವರಿದಿಯಾಗಿರುವುದಿಲ್ಲ

ರಾಜ್ಯದಲ್ಲಿ ಸಿದ್ದ ಉಡುಪುಗಳ ಪಾರ್ಕ್ ಸ್ಥಾಪನೆ

43 (254) ಶ್ರೀ ಸದಾನಂದ ಗೌಡ ಡಿ ವಿ (ಪುತ್ತೂರು) ಮಾನ್ಯ ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಿದ್ದ ಉಡುಪುಗಳ ಪಾರ್ಕ್ ಸ್ಥಾಪಿಸುವ ವಿಚಾರ ಸರ್ಕಾರದ ಮುಂದಿದೆಯೇ

ಆ) ಇದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ ಹಾಗೂ ಇದರ ಉದ್ದೇಶಗಳೇನು, ಇದಕ್ಕೆ ತಗಲುವ ವೆಚ್ಚವೆಷ್ಟು ಎಲ್ಲಿ ಸ್ಥಾಪಿಸಲು ನಿರ್ಧರಿಸಲಾಗಿದೆ

ಇ) ಸಿದ್ಧ ಉಡುಪುಗಳ ಪಾರ್ಕ್ ತೆರೆಯಲು ರಾಜ್ಯ ಮುಂದೆ ಬಂದಲ್ಲಿ ಇದಕ್ಕೆ ಕೇಂದ್ರ ಸರ್ಕಾರ ಆರ್ಥಿಕ ನೆರವು ನೀಡುವುದೇ ಎಷ್ಟು ನೆರವು ಒದಗಿಸಲಾಗುತ್ತದೆ

ಈ) ಈ ಆರ್ಥಿಕ ನೆರವು ಪಡೆಯುವ ನಿಟ್ಟಿನಲ್ಲಿ ರಾಜ್ಯ ಸರಕಾರ ಕೈಗೊಂಡ ಕ್ರಮಗಳೇನು

ಉ) ಕೈಗೊಳ್ಳದಿದ್ದಲ್ಲಿ ಕಾರಣಗಳೇನು?

ಶ್ರೀ ಹೆಚ್ ಎಂ ರೇವಣ್ಣ (ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು)

ಅ) ಹೌದು

ಆ) ದೊಡ್ಡಬಳ್ಳಾಪುರ ಹಾಗೂ ಬಳ್ಳಾರಿ ಇಲ್ಲಿ ಅಪರೆಲ್ ಪಾರ್ಕ್‌ಗಳನ್ನು ಸ್ಥಾಪಿಸಲು ಉದ್ದೇಶಿಸಿದೆ ಉದ್ದೇಶಿತ ದೊಡ್ಡಬಳ್ಳಾಪುರದ ಪಾರ್ಕಿನ ಅಂದಾಜು ವೆಚ್ಚ ರೂ 32 97 ಕೋಟಿಗಳಾಗಿದ್ದು ಆ ಯೋಜನೆಗೆ ಕೇಂದ್ರ ಸರಕಾರ ಅನುಮೋದನೆ ನೀಡಿರುತ್ತದೆ ಅದನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ದೊಡ್ಡಬಳ್ಳಾಪುರದಲ್ಲಿ 187 ಎಕರೆ ಜಮೀನನ್ನು ಕೆ ಐ ಎ ಡಿ ಬಿ ಮುಖಾಂತರ ಸ್ವಾಧೀನ ಪಡಿಸಿಕೊಳ್ಳಲಾಗುತ್ತಿದೆ

ಉದ್ದೇಶಗಳು –

1 ಅಂತರಾಷ್ಟ್ರೀಯ ಹಾಗೂ ಸ್ಥಳೀಯ ಮಾರುಕಟ್ಟೆಗೆ ಬೇಕಾಗುವ ಗುಣಮಟ್ಟದ ಉತ್ಪನ್ನಗಳನ್ನು ತಯಾರಿಸುವುದು

2 ಅಪೇರಲ್ ಉದ್ಯಮಕ್ಕೆ ಸಂಬಂಧಿಸಿದ ಜವಳಿ ಉದ್ಯಮಗಳು, ಪೂರಕ ಉದ್ಯಮಗಳು (ancillary Units) ಹಾಗೂ ಸೇವಾ ಘಟಕಗಳ ಸೇವೆಯನ್ನು ಒಂದೇ ಸ್ಥಳದಲ್ಲಿ ಸಿಗುವಂತೆ ಮಾಡುವುದು

3 ಉತ್ಪಾದಿಸುವ ಒಟ್ಟು ಉತ್ಪನ್ನಗಳಲ್ಲಿ ಕನಿಷ್ಠ ಶೇ 25 ಭಾಗವನ್ನು ಹೊರದೇಶಗಳಿಗೆ ರಫ್ತು ಮಾಡುವುದು

4 ಸುಮಾರು 50,000 ಜನರಿಗೆ ಉದ್ಯೋಗಾವಕಾಶ ಒದಗಿಸುವುದು

ಇ ಹೌದು ಪ್ರತಿ ಅಂತಹ ಪಾರ್ಕ್‌ಗೆ ರೂ 17 00 ಕೋಟಿಗಳು

ಈ) ರಾಜ್ಯ ಸರ್ಕಾರವು ಭೂಮಿಯನ್ನು ಅದರ ವೆಚ್ಚದಲ್ಲಿ ಸ್ವಾಧೀನ ಪಡಿಸಿಕೊಳ್ಳುತ್ತಿದ್ದು ಇತರೆ ಉದ್ದೇಶಗಳಿಗೆ ಬೇಕಾಗುವ ಹಣವನ್ನು ನಂತರ ಕೇಂದ್ರ ಸರ್ಕಾರದಿಂದ ಪಡೆಯಲು ಕ್ರಮ ಕೈಗೊಳ್ಳಲಾಗುವುದು

ಉ) ಉದ್ಭವಿಸುವುದಿಲ್ಲ

ವಿವಿಧ ಇಲಾಖೆಗಳಲ್ಲಿರುವ ಬ್ಯಾಕ್‌ಲಾಗ್ ಹುದ್ದೆಗಳು

44 (318) ಶ್ರೀ ಸೋಮಶೇಖರ್ ಬಿ (ಮಳವಳ್ಳಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಬ್ಯಾಕ್ ಲಾಗ್ ಹುದ್ದೆಗಳ ಸಂಖ್ಯೆ ಎಷ್ಟು ಇಲಾಖಾವಾರು ವಿವರಗಳನ್ನು ನೀಡುವುದು

ಆ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲಾಗಿದೆ, ಇಲಾಖಾವಾರು ಹಾಗೂ ವರ್ಷವಾರು ವಿವರಗಳನ್ನು ನೀಡುವುದು

ಇ) ಬಾಕಿ ಹುದ್ದೆಗಳನ್ನು ತುಂಬಲು ಸರ್ಕಾರ ಕಾಲಮಿತಿಯನ್ನೇನಾದರೂ ವಿಧಿಸಿದೆಯೇ, ಹಾಗಿದ್ದಲ್ಲಿ ಯಾವಾಗ ಪೂರ್ಣ ಪ್ರಮಾಣದಲ್ಲಿ ತುಂಬಲಾಗುವುದು,

ಈ) ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಇರುವ ನಿಯಮಾವಳಿಗಳೇನು

ಉ) ಈಗಿರುವ ನಿಯಮಾವಳಿಗಳಿಂದ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಊ) ಹಾಗಿದ್ದಲ್ಲಿ, ಈಗಿರುವ ನಿಯಮಾವಳಿಗಳನ್ನು ಬದಲಾವಣೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ,ಹಾಗಿದ್ದಲ್ಲಿ, ಯಾವಾಗಿನಿಂದ ಜಾರಿಗೆ ತರಲಾಗುವುದು ವಿವರಗಳನ್ನು ನೀಡುವುದು?